ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಫ್ರಾಸಾ | 18 |
| ಚಾಸಾ | 20 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ4
(ಸಿವಿಲ್)

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆ:47/2024**

**ದಿನಾಂಕ: 19.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ನಂದಕುಮಾರ ಬಿ.ಎಸ್. |
| ತಂದೆಯ ಹೆಸರು | : | ಬಿ.ಕೆ ಶಿವಣ್ಣ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಪೋಲಿಸ್ ಇನ್ಸ್ಪೆಕ್ಟರ್ ಲೋಕಾಯುಕ್ತ ಬೆಂಗಳೂರು ಗ್ರಾಮಾಂತರ ಜಿಲ್ಲಾ ಲೋಕಾಯುಕ್ತ ಪೋಲಿಸ್ ಠಾಣೆ |
| ವಾಸಸ್ಥಳ | : | ಬೆಂಗಳೂರು |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ನಾನು ದಿನಾಂಕ ಆಗಸ್ಟ್ 2022 ರಿಂದ ಅಕ್ಟೋಬರ್ 2023 ರವರೆಗೆ ಸಿ.ಪಿ.ಐ ಶಿಡ್ಲಘಟ್ಟ ಆಗಿ ಕರ್ತವ್ಯ ನಿರ್ವಹಿಸಿದ್ದೇನು.

2. ದಿನಾಂಕ 21-06-2023 ರಂದು ದಿಬ್ಬೂರಹಳ್ಳಿ ಪೋಲಿಸ್ ಠಾಣೆಯ ಪಿ.ಎಸ್.ಐ ಕೃಷ್ಣಪ್ಪ ಫ್ರಾಸಾ-14 ರವರಿಂದ

ಈ ಪ್ರಕರಣದ ಕಡತವನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 22-06-2023 ರಂದು ದಿಬ್ಬೂರಹಳ್ಳಿ ಪೋಲಿಸ್ ಠಾಣೆಯ ಹೆಚ್.ಸಿ ಲೋಕೇಶ್ ಫ್ರಾಸಾ-15 ರವರು ಈ ಪ್ರಕರಣದ ಆರೋಪಿಯಾದ ದಾವೂದ್ ಪಾಶಾ ರವರನ್ನು ಗಂಜಿಗುಂಟೆ ಗ್ರಾಮದಲ್ಲಿ ವಶಕ್ಕೆ ಪಡೆದುಕೊಂಡು ಆ ದಿನ ಬೆಳಿಗ್ಗೆ 07-30 ಗೆ ಸದರಿ ಆರೋಪಿಯನ್ನು ವರದಿಯೊಂದಿಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. . ಸದರಿ ಆರೋಪಿಯನ್ನು ಮತ್ತು ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಆರೋಪಿ ಮತ್ತು ವರದಿಯನ್ನು ನೋಡಿ ಗುರುತಿಸಿದ್ದು, ವರದಿಯನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ವಿಚಾರಣೆ ಮಾಡಲಾಗಿ ಆತ ತಪ್ಪು ಒಪ್ಪಿ ಕೊಂಡ ಮೇರೆಗೆ ಆತನ ಸ್ವಇಚ್ಚಾ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ನಂತರ ಸದರಿ ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಸದರಿ ಆರೋಪಿಯ ಅಂಗಶೋಧನ ಮಾಡಲಾಗಿ ಆತನ ವಶದಲ್ಲಿದ್ದಂತಹ ವಿವೋ ಮೊಬೈಲ್ ನ್ನು ಹಾಜರುಪಡಿಸಿದ್ದು ಅದರ ಮುಂದಿನ ತನಿಖೆಗೋಸ್ಕರ ಅಮಾನತು ಪಂಚನಾಮೆಯ ಮೂಲಕ ಪಂಚರಾದ ಫ್ರಾಸಾ-9 ಚೆನ್ನಕೇಶವ , ಫ್ರಾಸಾ-8 ಪ್ರಭು ವಿ. ರವರ ಸಮಕ್ಷಮ ಮದ್ಯಾಹ್ನ 12-00 ರಿಂದ 12-

45 ವರೆಗೆ ಸಿ.ಪಿ.ಐ ಕಚೇರಿಯಲ್ಲಿ ಜರುಗಿಸಿರುತ್ತೇನೆ. ಸದರಿ ಮಾಲನ್ನು ದಿಬ್ಬೂರಹಳ್ಳಿ ಪೋಲಿಸ್ ಠಾಣೆಯ ಮಾಲು ಪಟ್ಟಿ ಸಂಖ್ಯೆ 78/2023 ರಂತೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆ ಹಾಗೂ ಮೊಬೈಲ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅಮಾನತ್ತು ಪಂಚನಾಮೆ ಮತ್ತು ಮೊಬೈಲ್  ನ್ನು ನೋಡಿ ಗುರುತಿಸಿದ್ದು, ಅಮಾನತ್ತು ಪಂಚನಾಮೆ ಈಗಾಗಲೇ ನಿಪಿ-9 ಎಂದು , ಸಾಕ್ಷಿಯ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು.  ಸಾಕ್ಷಿಯು ಮು.ಮಾ.7 ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಅಮಾನತ್ತು ಪಂಚನಾಮೆಯ ಸಮಯ ಪೋಟೋಗಳನ್ನು ತೆಗೆಸಿರುತ್ತೇನೆ. ಸಾಕ್ಷಿಯು ಪೋಟೊ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯುು ಪೋಟೊವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು.  ಸದರಿ ಪೋಟೊವನ್ನು ಚಾಸಾ-18 ನರಸಿಂಹಯ್ಯ ಸಿ.ಹೆಚ್.ಸಿ 186 ರವರಿಂದ ತೆಗೆಸಿರುತ್ತೇನೆ. ಆ ಬಗ್ಗೆ  ಚಾಸಾ-18 ರವರಿಂದ ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದಂತೆ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು  ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ21 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು, ಚಾಸಾ-18

| | |
|---|---|
| ಫ್ರಾಸಾ | 18 |
| ಚಾಸಾ | 20 |

ರವರ ಸಹಿಯನ್ನು ನಿಪಿ21(ಬಿ) ಎಂದು ಗುರುತಿಸಲಾಯಿತು.

ನಂತರ ಸದರಿ ಆರೋಪಿಯನ್ನು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಗೆ ವೈದ್ಯಕೀಯ ಪರೀಕ್ಷೆಯ ನಡೆಸಿ, ನಂತರ ಸದರಿ ಆರೋಪಿಯನ್ನು ನ್ಯಾಯಾಂಗ ಬಂಧನದಲ್ಲಿ ಇರಿಸುವಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನತಂರ ಅದೇ ದಿನ ಸದರಿ ಕೇಸಿನ ನೊಂದ ಮಹಿಳೆ ಸ್ಥಳವನ್ನು ತೋರಿಸಿದ ಮೇರೆಗೆ ಮದ್ಯಾಹ್ನ 03-00 ರಿಂದ 04-00 ವರೆಗೆ ಗಂಜಿಗುಂಟೆ ಗ್ರಾಮದ ಅವರ ವಾಸದ ಮನೆಯಲ್ಲಿ ಪಂಚರುಗಳಾದಂತಹ ಫ್ರಾಸಾ- ರೋಷನ್ , ಫ್ರಾಸಾ-5 ರಾಮಯ್ಯ ರವರ ಸುವಕ್ಷಮ ಫ್ರಾಸಾ-1 ರವರು ತೋರಿಸಿದಂತೆ ಸ್ಥಳ ಮಹಜರ್ ನ್ನು ಜರುಗಿಸಿರುತ್ತೇನೆ. ಅದೇ ಸಮಯದಲ್ಲಿ ಪೋಟೊಗಳನ್ನು ಚಾಸಾ-18 ರವರಿಂದ ತೆಗೆಸಿ ನಂತರ ಕಚ್ಚಾ ನಕಾಶೆ ಯನ್ನು ತಯಾರಿಸಿರುತ್ತೇನೆ. ಮಹಜರ್ , ಪೋಟೊ ಮತ್ತು ಕಚ್ಚಾ ನಕಾಶೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್, ಪೋಟೊ ಮತ್ತು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು , ಮಹಜರ್ ನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಪೋಟೊ ಮತ್ತು ನಕಾಶೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-22 ಮತ್ತು ನಿಪಿ-23 ಎಂದು ಗುರುತಿಸಲಾಯಿತು. ನಿಪಿ-23

ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ದಿ.23-06-2023 ರಂದು ಸದರಿ ನೊಂದ ಮಹಿಳೆ ರವರನ್ನು ದಿಬ್ಬೂರಹಳ್ಳಿ ಡಬ್ಲ್ಯೂ ಪಿಸಿಚಾಸಾ-16 ಶಿಲ್ಪಾ ರವರ ಮುಖಾಂತರ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ವೈಧ್ಯಕೀಯ ಪರೀಕ್ಷೆ ಮಾಡಿಸಿರುತ್ತೇನೆ. ನಂತರ ಅದೇ ದಿನ ಸಾಕ್ಷಿದಾರರಾದಂತಹ ಮಂಜುನಾಥ , ಪ್ರವೀಣ , ರೋಷನ್ , ನರಸಿಂಹಮೂರ್ತಿ , ರಾಮಯ್ಯ , ಚೆನ್ನಕೇಶವ , ನರಸಿಂಹಯ್ಯ ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ. ದಿನಾಂಕ 24-06-2023 ರಂದು ಸದರಿ ಸ್ಥಳದ ಹೌಸ್ ಲಿಸ್ಟ್ ನೀಡುವಂತೆ ಪಿಡಿಓ ಗಂಜಿಗುಂಟೆ ಗ್ರಾಮ ಪಂಚಾಯ್ತಿ ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ದಿನಾಂಕ 05-07-2023 ರಂದು ಪಿಡಿಓ ರವರು ನೀಡಿದ್ದ ಹೌಸ್ ಲಿಸ್ಟ್ ನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಮನೆ ವೆಂಕಟೇಶಪ್ಪ, ಬಿನ್. ಆಂಜನಪ್ಪ ರವರ ಹೆಸರಿನಲ್ಲಿ ಇರುತ್ತದೆ. ಕವರಿಂಗ್ ಲೇಟರ್ ಮತ್ತು ಹೌಸ್ ಲಿಸ್ಟ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಕವರಿಂಗ್ ಲೇಟರ್ ಮತ್ತು ಹೌಸ್ ಲಿಸ್ಟ್ ನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-24 ಮತ್ತು ನಿಪಿ-25 ಎಂದು , ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-24(ಎ) ಮತ್ತು ನಿಪಿ-25(ಎ) ಎಂದು ಗುರುತಿಸಲಾಯಿತು. ಸದರಿ ವೆಂಕಟೇಶಪ್ಪ ಫ್ರಾಸಾ-1 ರವರ ಮಾವ ಆಗಿರುತ್ತಾರೆ.

| | |
|---|---|
| ಫ್ರಾಸಾ | 18 |
| ಚಾಸಾ | 20 |

ನಂತರ ದಿ.27-06-2023 ರಂದು ಮಾನ್ಯ ನ್ಯಾಯಾಲಯಕ್ಕೆ ನೊಂದ ಮಹಿಳೆಯ ಕಲಂ 164 ಸಿ.ಆರ್.ಪಿ.ಸಿ ಹೇಳಿಕೆಯನ್ನು ದಾಖಲು ಮಾಡುವಂತೆ ಮನವಿ ಸಲ್ಲಿಸಿರುತ್ತೇನೆ. ಆನಂತರ ದಿ.05-07-2023 ರಂದು ಮಾನ್ಯ 1 ನೇ ಸಿವಿಲ್ ಜಡ್ಜ್ ಆ್ಯಂಡ್ ಜೆ.ಎಂ.ಎಫ್.ಸಿ ನ್ಯಾಯಾಲಯ ಚಿಕ್ಕಬಳ್ಳಾಪುರದಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.12-07-2023 ರಂದು ದಿಬ್ಬೂರಹಳ್ಳಿ ಠಾಣೆ ಡಬ್ಲೂಪಿಸಿ ಶಿಲ್ಪಾರವರು ಆರೋಪಿ ಮತ್ತು ಫ್ರಾಸಾ-1 ರವರ ವೈದ್ಯಕೀಯ ಪರೀಕ್ಷೆ ಸಮಯದಲ್ಲಿ ವೈದ್ಯರು ಸಂಗ್ರಹಿಸಿಕೊಟ್ಟಂತಹ ವಸ್ತುಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದು, ಅವುಗಳೆಂದರೆ ಫ್ರಾಸಾ 1 ರವರು No.1 Scalphair , No.2 Head hair combing, No.3 Nail scarpings, No.4 Nail clippings, No.5 Oral swab, No.6 Two Valval Swab, No.7 Two Veginal swab, No.8 Two Anal swab, No.9 Vaginal Smear, No.10 Vaginal washing, No.11 Urethral swab, No.12 Green colour Duppatta, NO.13 Orange colour top, No.14 Green colour pant, No.15 Blue colour Petticote, No.16 Green colour Bra, No/17 Green colour panty ಹಾಗೂ ಆರೋಪಿಯ ವಸ್ತುಗಳಾದ ನಂ. 1 Tip of Penis swab, No.2 Glans

Penis Swab, No.3 Pubic hairs , No.4 Nail clipping, No.5 Voilet under-wear, No.6 Voilet Baniyan, No.7 white full shirt, No.8 Cement colour pant ಅವುಗಳನ್ನು ಹಾಜರುಪಡಿಸಿದ ಮೇರೆಗೆ ಮುಂದಿನ ವೈಜ್ಞಾನಿಕ ಪರೀಕ್ಷೆ ಗೋಸ್ಕರ ದಿಬ್ಬೂರಹಳ್ಳಿ ಠಾಣೆ ಸ್ವತ್ತು ಪಟ್ಟಿ ಸಂಖ್ಯೆ 82/2023 ರಂತೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿ.25-07-2023 ರಂದು ದಿಬ್ಬೂರಹಳ್ಳಿ ಠಾಣಾ ಸಿಬ್ಬಂಧಿ ಶಿಲ್ಪಾರವರ ಮೂಲಕ ಎಫ್.ಎಸ್.ಎಲ್ ಬೆಂಗಳೂರು ರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅವರು ಎಫ್.ಎಸ್.ಎಲ್ ಬೆಂಗಳೂರು ರವರಿಗೆ ನೀಡಿದ್ದ ಬಗ್ಗೆ ಸ್ವೀಕೃತಿ ಮತ್ತು ವರದಿಯನ್ನು ತಂದು ನೀಡಿದ್ದು ಅದನ್ನು ನಾನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸ್ವೀಕೃತಿ ಮತ್ತು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-26 ಮತ್ತು ನಿಪಿ-27 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-26(ಎ) ಮತ್ತು ನಿಪಿ-27(ಎ) ಎಂದು ಗುರುತಿಸಲಾಯಿತು. ವರದಿಯನ್ನು ದಿ.12-07-2023 ರಂದು ನೀಡಿರುತ್ತಾರೆ. ಸ್ವೀಕೃತಿ ಯನ್ನು ದಿ.25-07-2023 ರಂದು ನೀಡಿರುತ್ತಾರೆ. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ ಅವುಗಳಲ್ಲಿ ಸಾಕ್ಷಿ ಮುದ್ದೆ ಮಾಲು-1 ರಿಂದ ಮು.ಮಾ.7 ನ್ನು ನೋಡಿ ಗುರುತಿಸಿರುತ್ತಾರೆ.

| | |
|---|---|
| ಪ್ರಾಸಾ | 18 |
| ಚಾಸಾ | 20 |

ನ್ಯಾಯಾಲಯದ ಅನುಮತಿ ಮೇರೆಗೆ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ವಕೀಲರ ಸಮಕ್ಷಮ ಮು.ಮಾ.8 ತೆರೆದು ನೋಡಲಾಗಿ ಅದರಲ್ಲಿ Scalphair ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.9 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Head hair combing ಇದ್ದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.10 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Nail Scarping ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.11 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Nail clipping ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.12 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Oral Swab ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.13 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Two Valval swab ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.14 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು

| | |
|---|---|
| ಪ್ರಾಸಾ | 18 |
| ಚಾಸಾ | 20 |

ನೋಡಲಾಗಿ ಅದರಲ್ಲಿ Two Vaginal swab ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.15 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Two Anal Swab ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.16 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Vaginal Smear ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.17 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Vaginal Washing ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.18 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Urethral Swab ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.19 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ ಆರೋಪಿಯ Pubic Hair ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.20 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Glans Penis Swab ಇದ್ದು ಅದನ್ನು ಸಾಕ್ಷಿ ನೋಡಿ

ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.21 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Nail clippings ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.22 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Under Wear ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.23 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Baniyan ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.24 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ White Shirt ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.25 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Pant ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಮು.ಮಾ.26 ಎಂದು ಗುರುತು ಮಾಡಲಾಗಿರುವ ಪಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ Tip of Penis Swab ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

| | |
|---|---|
| ಫ್ರಾಸಾ | 18 |
| ಚಾಸಾ | 20 |

ದಿ.25.10.2023 ರಂದು ಸೆನ್ ಪೋಲಿಸ್ ಠಾಣೆಯ ಇನ್ಸ್ ಪೆಕ್ಟರ್ ರವರಿಗೆ ಸದರಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮೊಬೈಲ್ ನ Extract ಮಾಡಿ ವರದಿ ನೀಡುವಂತೆ ಕೋರಿಕೆ ಪತ್ರ ಸಲ್ಲಿಸಿದ್ದೆ. ಅದರಂತೆ ನಂತರ ದಿ.25-10-2023 ರಂದು ಚಿಕ್ಕಬಳ್ಳಾಪುರದ ಸೆನ್ ಪೋಲಿಸ್ ಠಾಣೆ ಯಲ್ಲಿ ಮೊಬೈಲ್ ಪೋನ್ Extract ಪಂಚನಾಮೆ ಯನ್ನು ಫ್ರಾಸಾ-6 ಡಿ.ಎನ್ ಬೈರಾರೆಡ್ಡಿ, ಫ್ರಾಸಾ-7 ಶಂಕರ ರವರ ಸಮಕ್ಷಮ ಮದ್ಯಾಹ್ನ 01-20 ರಿಂದ 01-45 ರ ವರೆಗೆ ಸದರಿ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾವೆಯನ್ನು ನೋಡಿದರೆ ಗುರುತಿಸಿಸುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಸದರಿ ಪಂಚನಾಮೆಯ ಸಂದರ್ಭದಲ್ಲಿ Extract ಮಾಡಿದ ಬಗ್ಗೆ ವರದಿಯನ್ನು ಸೆನ್ ಪೋಲಿಸ್ ಠಾಣೆಯ ಹೆಚ್.ಸಿ ಕೃಷ್ಣಪ್ಪ ರವರು ನೀಡಿರುತ್ತಾರೆ. ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಕೋರಿಕೆ ಪತ್ರ ಮತ್ತು ಸ್ವೀಕೃತಿ ಮತ್ತು ವರದಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-28, ನಿಪಿ-29, ನಿಪಿ-30 ಎಂದು ಗುರುತಿಸಲಾಯಿತು. ನಿಪಿ-28, ನಿಪಿ-29 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-

| | |
|---|---|
| ಫ್ರಾಸಾ | 18 |
| ಚಾಸಾ | 20 |

28(ಎ), ನಿಪಿ-29(ಎ) ಎಂದು ಗುರುತಿಸಲಾಯಿತು. ನಂತರ ನನಗೆ ವರ್ಗಾವಣೆ ಆದ ಕಾರಣ ಸದರಿ ಪ್ರಕರಣದ ಕಡತವನ್ನು ಸಿ.ಪಿ.ಐ ಶ್ರೀನಿವಾಸ ರವರಿಗೆ ಹಸ್ತಾಂತರಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಎ.ಕೆ.ವಕೀಲರಿಂದಃ</u>**

2 ವರ್ಷಗಳ ಹಿಂದೆ ಜ್ಯೂಸ್ ನ್ನು ತಂದು ಕೊಟ್ಟಿದ್ದ ವಿಚಾರವಾಗಿ ಆರೋಪಿ ಕಡೆಯಿಂದ ಏನಾದರೂ ವಿಚಾರ ತಿಳಿದುಕೊಂಡು ಆ ಜ್ಯೂಸ್ ನ್ನು ಎಲ್ಲಿಂದ ತೆಗೆದುಕೊಂಡು ಹೋದ ಎಂಬ ಬಗ್ಗೆ ವಿಚಾರಣೆ ಮಾಡಿ ಸ್ಥಳಕ್ಕೆ ಹೋಗಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಿಪಿ-1 ದೂರು ನೀಡುವ ಪೂರ್ವದಲ್ಲಿ ಆರೋಪಿ ಪಿರ್ಯಾದಿದಾರರ ಮನೆಗೆ ಹೋಗಿ ಬರುವುದನ್ನು ನೋಡಿದ್ದೇವೆ ಎಂಬ ಬಗ್ಗೆ ಯಾರದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ನನ್ನ ತನಿಖಾ ಕಾಲದಲ್ಲಿ ಆ ಬಗ್ಗೆ ತನಿಖೆ ಮಾಡಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಆರೋಪಿ ಪಿರ್ಯಾದು ದಾರರಿಂದ 3 ಲಕ್ಷ ಹಣ ಪಡೆದ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಆ ಬಗ್ಗೆ ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿರುತ್ತಾರೆ. ನನ್ನ ಮುಂದೆ ಆರೋಪಿ ಫ್ರಾಸಾ-1 ರವರಿಂದ ದುಡ್ಡು ಪಡೆದ ಬಗ್ಗೆ

ಆತನ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ದಿ.17-05-2023 ರಂದು ತನ್ನ ಗಂಡ ಮನೆಯಲ್ಲಿ ಇಲ್ಲದೇ ಇದ್ದ ಸಮಯದಲ್ಲಿ ಆರೋಪಿ ಬಂದು ಹಠ ಸಂಭೋಗ ಮಾಡಿರುತ್ತಾನೆ ಎಂದು ತಿಳಿಸಿದ್ದು, ಸದರಿ ವಿಚಾರದ ಬಗ್ಗೆ ಯಾರಾದರೂ ಅಕ್ಕ ಪಕ್ಕದವರು ನೋಡಿದ್ದಾರಾ ಎಂಬ ಬಗ್ಗೆ ವಿಚಾರಣೆ ಮಾಡಿ ಸಾಕ್ಷಿದಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಅಗತ್ಯತೆ ಕಂಡು ಬಂದಿಲ್ಲ ಕಾರಣ ಪಿರ್ಯಾದಿ ಹೇಳಿರುತ್ತಾರೆ. ಆರೋಪಿಯನ್ನು ದಸ್ತಗಿರಿ ಮಾಡಿದ ನಂತರ ಆತನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ನಿಪಿ-23 ನ್ನು ಕಚೇರಿಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಕಚ್ಚಾ ನಕಾಶೆಯನ್ನು ಸ್ಥಳದಲ್ಲಿ ತಯಾರಿಸದೇ  ಇರುವ ಕಾರಣ ಅದರಲ್ಲಿ ಸಾಕ್ಷಿದಾರರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿರಲಿಲ್ಲ , ಸ್ಥಳದಲ್ಲಿ ಮಹಜರ್ ಮಾಡಿರಲಿಲ್ಲ, ಅದನ್ನು ಠಾಣೆಯಲ್ಲಿ ಬಣಬಟ್ಟು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಮುಂದೆ ಯಾವುದೇ ಸ್ವ ಇಚ್ಛಾ ಹೇಳಿಕೆ ನೀಡದೆ ಇದ್ದರೂ ನನ್ನ ಅನುಕೂಲಕೋಸ್ಕರ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಮಾನತ್ತು ಪಡಿಸಿಕೊಂಡಿದ್ದ ಮೊಬೈಲ್ ಪೋನ್ ನಲ್ಲಿ ಆರೋಪಿ ಮತ್ತು ಫ್ರಾಸಾ-1 ರವರಿಗೆ ಸಂಬಂಧಿಸಿದ ಯಾವುದೇ ಅಶ್ಲೀಲ ಚಿತ್ರ ಮತ್ತು ವಿಡಿಯೋ ಇರಲಿಲ್ಲ. ಆ ಬಗ್ಗೆ ವರದಿಯಲ್ಲೂ ಸಹ ಅಶ್ಲೀಲ ಚಿತ್ರ

| | |
|---|---|
| ಫ್ರಾಸಾ | 18 |
| ಚಾಸಾ | 20 |

ಮತ್ತು ವಿಡಿಯೋ ಇಲ್ಲ ಎಂದು ಕಂಡು ಬಂದಿದೆ ಎಂದರೆ ಸರಿ. ಫ್ರಾಸಾ-1 ರವರು ಮೌಖಿಕವಾಗಿ ಸುಸ್ತಾಗುತ್ತಿದೆ ಎಂದು ಹೇಳಿದ್ದರಿಂದ 1 ದಿನ ತಡವಾಗಿ ವೈದ್ಯಕೀಯ ಪರೀಕ್ಷೆಗೆ ಕಳುಹಿಸಿರುತ್ತೇನೆ. ನಾನು ಯಾವುದೇ ವಸ್ತುಗಳನ್ನು ವೈದ್ಯರಿಂದ ಸಂಗ್ರಹಿಸಿಲ್ಲ ಮತ್ತು ಅವುಗಳನ್ನು ಎಪ್.ಎಸ್.ಎಲ್ ಗೆ ಕಳುಹಿಸಿಲ್ಲ  ಎಂದರೆ ಸರಿಯಲ್ಲ. ನಾನು ಸೆನ್ ಪೋಲಿಸ್ ಠಾಣೆಯ ಹೆಚ್ .ಸಿ ಕೃಷ್ಣಪ್ಪ ರವರ ಹೇಳಿಕೆ ಪಡೆದುಕೊಂಡಿರುವುದಿಲ್ಲ ಕಾರಣ ನನಗೆ ಅಗತ್ಯತೆ ಕಂಡು ಬರಲಿಲ್ಲ. ನಾನು ಫ್ರಾಸಾ-1 ರವರನ್ನು ಯಾವುದೇ ನ್ಯಾಯಾಲಯಕ್ಕೆ ಕಲಂ 164 ಸಿ.ಆರ್.ಪಿ.ಸಿ ಹೇಳಿಕೆಯನ್ನು ದಾಖಲಿಸಿಕೊಳ್ಳಲು ಕಳುಹಿಸಿರಿಲಿಲ್ಲ ಎಂದರೆ ಸರಿಯಲ್ಲ. ವೆಂಕಟೇಶಪ್ಪ ರವರು  ಫ್ರಾಸಾ-1 ರವರ ಮಾವ ಎಂದು ಅವರ ಮರುಹೇಳಿಕೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಫ್ರಾಸಾ-1 ರವರ ಮಾವ ಬೇರೆ ಮದುವೆ ಆಗಿ ಬೇರೆ ಮನೆಯಲ್ಲಿ ವಾಸವಿರುತ್ತಾರೆ ಎಂದು ತಿಳಿಸಿರುತ್ತಾರೆ. ಆ ರೀತಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಪೋಟೊ ಗಳನ್ನು ಸೃಷ್ಠಿಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ ಆರೋಪಿಯ ವಿರುದ್ಧ ಏನು ದೋಷಾರೋಪ ಕಂಡು ಬರದೇ ಇದ್ದರೂ ಫ್ರಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ

| | |
|---|---|
| ಪ್ರಾಸಾ | 18 |
| ಚಾಸಾ | 20 |

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**(ದಿನಾಂಕಃ19.02.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ (ಕಾರ್ಯಸ್ಥಾನ ಚಿಂತಾಮಣಿ)**